**ಓ. ಎಸ್ . 270/2019**

**ಪಿ.ಡಬ್ಲ್ಯೂ- 2**

**(ದಿನಾಂಕಃ13-06-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

ಪಾಟಿ ಸವಾಲು ಃ ಶ್ರೀ ಆರ್ ವಿ ಜೆ ಪ್ರತಿವಾದಿ ಪರ ವಕೀಲರಿಂದ -

ಪ್ರತಿವಾದಿ ನಂ. 1 ರಿಂದ 4 ರವರಿಗೆ ಮನೆಗಳು ಇವೆ ಎಂದರೆ ಸರಿ . ಸದರಿ ಮನೆಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ . ಯರಗಟ್ಟಿ ಗ್ರಾಮದಲ್ಲಿ ಪ್ರತಿವಾದಿ ನಂ.1 ರವರ ಹೆಸರಿನಲ್ಲಿ ಮನೆ ಇತ್ತು ಎಂದರೆ ಸರಿ . ಸದರಿ ಮನೆಯನ್ನು ದೇವಸ್ಥಾನಕ್ಕೆ ಬಿಟ್ಟುಕೊಟ್ಟಿರುತ್ತೇವೆ. ಆ ವಿಚಾರವನ್ನು ಈ ದಾವೆಯಲ್ಲಿ ಬರೆದಿಲ್ಲ ಎಂದರೆ ಸರಿ .

ನಮ್ಮ ತಂದೆ ಬಸವಣ್ಣಿ ಇವರಿಗೆ 2 ಜನ ಅಣ್ಣತಮ್ಮಂದಿರು, ಶಂಕರ ಮತ್ತು ಕಾಡಪ್ಪ ಎಂದರೆ ಸರಿ . ಶಂಕರ, ಕಾಡಪ್ಪ ಮತ್ತು ನಮ್ಮ ತಂದೆಯ ನಡುವೆ ವಾಟನಿ ಆಗಿರುವುದಿಲ್ಲ. ನಮ್ಮ ತಂದೆಗೆ ಯಾವ ಯಾವ ಆಸ್ತಿಗಳಲ್ಲಿ ಎಷ್ಟು ಹಿಸ್ಸೆ ಬಂದಿದೆ ಎಂದು ನಿಖರವಾಗಿ ಹೇಳಲಾಗುವುದಿಲ್ಲ. ನಮ್ಮ ತಂದೆಗೆ ಯರಗಟ್ಟಿ ಗ್ರಾಮದ ಸರ್ವೆ ನಂ. 59/1 ಬ ದಲ್ಲಿ 17 ಗುಂಟೆ, ಸರ್ವೆ ನಂ. 59/3 ದಲ್ಲಿ 35 ಗುಂಟೆ 5 ಆಣೆ ಮತ್ತು ಯರನಾಳ ಗ್ರಾಮದ ಸರ್ವೆ ನಂ. 169/3 ರಲ್ಲಿ 1 ಎಕರೆ 6 ಗುಂಟೆ 5 ಆಣೆ, ಸರ್ವೆ ನಂ. 166/51 ಅ ದಲ್ಲಿ 1 ಎಕರೆ 13 ಗುಂಟೆ ಆಸ್ತಿ ಬಂದಿರುತ್ತದೆ. ನಮ್ಮ ತಂದೆಗೆ ಆಸ್ತಿ ಬಂದ ಬಗ್ಗೆ ಯಾವುದೇ ಕಾಗದ ಪತ್ರ ಇರುವುದಿಲ್ಲ. ಆ ಪ್ರಕರ ನಾವು ವರದಿಯನ್ನು ಕೊಟ್ಟಿರುವುದಿಲ್ಲ. ಸದರಿ ದಾವಾಆಸ್ತಿಗಳ ಚೆಕಬಂದಿ ಹಾಕಿರುವುದಿಲ್ಲ.

ನಮ್ಮ ಮತ್ತು ಪ್ರತಿವಾದಿ ನಂ.5 ರಿಂದ 7 ರವರ ನಡುವೆ ಯಾವುದೇ ತಂಟೆ ತಕರಾರು ಇರುವುದಿಲ್ಲ. ಪಾಲು ಬೇಕು ಎಂದು ನಾನು ನಮ್ಮ ತಂದೆಯವರಿಗೆ ಕೇಳಿದೆ. ನಾವು ನಮ್ಮ ತಂದೆ ಕೂಡಿ ಇದ್ದೆವು ಎಂದರೆ ಸರಿಯಲ್ಲ. ಬೇರೆ ಬೇರೆ ಇರುತ್ತೇವೆ. ನಾವು ಬೇರೆಯಾಗಿ 18 ವರ್ಷಗಳಾಗಿರುತ್ತವೆ. ಪ್ರತಿವಾದಿ ನಂ.3 ಮತ್ತು 4 ರವರೂ ಸಹ ಬೇರೆಯಾಗಿ ಇರುತ್ತಾರೆ. ಪ್ರತಿವಾದಿ ನಂ.5 ರಿಂದ 7 ರವರಿಗೆ ಪಾಲು ಮಾಡಿ ಕೊಡಿ ಎಂದು ನಾನು ಕೇಳಿರುವುದಿಲ್ಲ. ಯರನಾಳ ಗ್ರಾಮದ ಸರ್ವೆ ನಂ. 169/2 ರಲ್ಲಿ ಬಾವಿ ಇರುತ್ತದೆ. ಪ್ರತಿವಾದಿ ನಂ.5 ರಿಂದ 7 ರವರೊಂದಿಗೆ ಸಮಾಯಿಕ ಬಾವಿ ಇರುತ್ತದೆ ಎಂದರೆ ಸರಿ . ಬಾವಿ ನೀರಿಗಾಗಿ ಯಾವುದೇ ತಕರಾರು ಇರುವುದಿಲ್ಲ. ನಾನು ಪ್ರತಿವಾದಿ ನಂ.5 ರಿಂದ 7 ರವರ ಮೇಲೆ ದಾವೆ ಮಾಡಿರುವುದಿಲ್ಲ. ನನ್ನ ಮತ್ತು ಪ್ರತಿವಾದಿ ನಂ.5 ರಿಂದ 7 ರವರ ನಡುವೆ ಯಾವುದೇ ತಕರಾರು

ಇಲ್ಲದಿದ್ದರೂ ಸಹ ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಮಾಡಿರುತ್ತೇನೆಂದರೆ ಸರಿಯಲ್ಲ.

ಈ ಹಿಂದೆ ನಮ್ಮ ಹಿರಿಯರ ನಡುವೆ ಒಂದು ದಾವೆ ಹೂಡಲಾಗಿತ್ತು ಎಂದರೆ ಸರಿ . ಸದರಿ ದಾವೆಯ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನಮಗೆ ದಾವಾಆಸ್ತಿಗಳ ಕ್ಷೇತ್ರ ಸರಿಯಾಗಿ ಇಲ್ಲದ ಕಾರಣ ಪ್ರತಿವಾದಿ ನಂ.1 ರಿಂದ 4 ರವರ ಜೊತೆಗೂಡಿ ಸುಳ್ಳು ದಾವೆ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೆ ಕೇ ಸರಿ ಅದೇ

ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ